ಕರ್ನಾಟಕ ಸರ್ಕಾರ
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2021–22** **ದಿನಾಂಕ : 12–11–2021**

# ಪತ್ರಿಕಾ ಪ್ರಕಟಣೆ

**PRESS RELEASE**

## ಪ್ರಮಾಣ ವಚನದ ಸ್ಪಷ್ಟೀಕರಣ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ):

ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಸಿಂಧಗಿ ಕ್ಷೇತ್ರದಿಂದ ಆಯ್ಕೆಯಾದ ಶ್ರೀ ಭೂಸನೂರು ರಮೇಶ್ ಬಾಳಪ್ಪ ಮತ್ತು ಹಾನಗಲ್ ಕ್ಷೇತ್ರದಿಂದ ಆಯ್ಕೆಯಾದ ಶ್ರೀ ಮಾನೆ ಶ್ರೀನಿವಾಸ ರವರುಗಳು ಪ್ರಮಾಣ ವಚನ ತೆಗೆದುಕೊಳ್ಳಲು ದಿನಾಂಕ:11.11.2021 ರಂದು ಬೆಳಗ್ಗೆ 11.00 ಗಂಟೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮಕ್ಕೆ ಬೆಳಗ್ಗೆ 10.45 ರೊಳಗೆ ಆಗಮಿಸುವಂತೆ ಇಬ್ಬರೂ ಮಾನ್ಯ ಶಾಸಕರಿಗೆ ತಿಳಿಸಲಾಗಿತ್ತು.

ಅದರಂತೆ, ಶ್ರೀ ಭೂಸನೂರು ರಮೇಶ್ ಬಾಳಪ್ಪ ಮತ್ತು ಶ್ರೀ ಮಾನೆ ಶ್ರೀನಿವಾಸ ರವರುಗಳು ಆಗಮಿಸಿದ್ದರು. ಮಾನ್ಯ ಸಭಾಧ್ಯಕ್ಷರು ಕಾರ್ಯಕ್ರಮಕ್ಕೆ ಆಗಮಿಸಿದ ನಂತರ ಶ್ರೀ ಮಾನೆ ಶ್ರೀನಿವಾಸ ರವರು ಮಾನ್ಯ ಸಭಾಧ್ಯಕ್ಷರೊಂದಿಗೆ ಮಾತನಾಡಿ ಎರಡು ನಿಮಿಷ ಹೊರಹೋಗಿ ಬರುವುದಾಗಿ ಕೋರಿದರು. ಮಾನ್ಯ ಸಭಾಧ್ಯಕ್ಷರು ಕಾರ್ಯಕ್ರಮ ಮುಗಿಸಿಕೊಂಡು ಹೋಗಲು ತಿಳಿಸಿದರು. ಆದಾಗ್ಯೂ ಶ್ರೀ ಮಾನೆ ಶ್ರೀನಿವಾಸ ರವರು ಆ ಸ್ಥಳದಿಂದ ನಿರ್ಗಮಿಸಿದರು. ಸಮಯಕ್ಕೆ ಸರಿಯಾಗಿ ಪ್ರಮಾಣ ವಚನ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು ಶ್ರೀ ಭೂಸನೂರು ರಮೇಶ್ ಬಾಳಪ್ಪ ರವರು ಪ್ರಮಾಣ ವಚನವನ್ನು ತೆಗೆದುಕೊಂಡರು. ಆದರೆ ಶ್ರೀ ಮಾನೆ ಶ್ರೀನಿವಾಸ ರವರು ಪ್ರಮಾಣ ವಚನ ತೆಗೆದುಕೊಳ್ಳಲು ಮಾನ್ಯ ಸಭಾಧ್ಯಕ್ಷರು ಸುಮಾರು 10 ನಿಮಿಷಗಳ ಕಾಲ ಕಾದರೂ ಸಹ ಅವರು ವಾಪಸ್ಸು ಬಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಆದರೆ, ಶ್ರೀ ಮಾನೆ ಶ್ರೀನಿವಾಸ ರವರಿಗೆ ಪ್ರಮಾಣ ವಚನ ತೆಗೆದುಕೊಳ್ಳಲು ದಿನಾಂಕ:11.11.2021 ರಂದು ಮಧ್ಯಾಹ್ನ 12.00 ಗಂಟೆಗೆ ಮಾನ್ಯ ಸಭಾಧ್ಯಕ್ಷರು ಸಮಯವನ್ನು ನೀಡಿದ್ದರೂ ಪ್ರಮಾಣ ವಚನ ಬೋಧಿಸಲು ಮಾನ್ಯ ಸಭಾಧ್ಯಕ್ಷರು ಕಛೇರಿಗೆ ಬಂದಿರಲಿಲ್ಲ ಎಂಬುದಾಗಿ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ವರದಿಯಾಗಿರುತ್ತದೆ. ಆದರೆ ಇದು ಸತ್ಯಕ್ಕೆ ದೂರವಾದದು.

ಶ್ರೀ ಮಾನೆ ಶ್ರೀನಿವಾಸ ರವರು ಪ್ರಮಾಣ ವಚನ ತೆಗೆದುಕೊಳ್ಳಲು ದಿನಾಂಕ:11.11.2021 ರಂದು ಮಧ್ಯಾಹ್ನ 12.00 ಗಂಟೆಗೆ ಸಮಯವನ್ನು ಮಾನ್ಯ ಸಭಾಧ್ಯಕ್ಷರಾಗಲಿ ಅಥವಾ ವಿಧಾನಸಭೆ ಸಚಿವಾಲಯದಿಂದಾಗಲಿ ಅಧಿಕೃತವಾಗಿ ನಿಗದಿಪಡಿಸಿರಲಿಲ್ಲ. ಆದಾಗ್ಯೂ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ತಪ್ಪಾಗಿ ವರದಿಯಾಗಿರುವುದರಿಂದ ಈ ಸ್ಪಷ್ಟೀಕರಣವನ್ನು ನೀಡಲಾಗಿದೆ ಎಂದು ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿಗಳು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೀಡಿಯೋ ಚಿತ್ರೀಕರಿಸುವ ವಸತಿ ತರಬೇತಿ ಕಾರ್ಯಾಗಾರ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ):

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾದ ವಿಜ್ಞಾನ ಪ್ರಸಾರ್ ಸಂಸ್ಥೆಯ ಸಹಯೋಗದೊಂದಿಗೆ ವೀಡಿಯೋ ಚಿತ್ರೀಕರಿಸುವ ವಸತಿ ತರಬೇತಿ ಕಾರ್ಯಾಗಾರವನ್ನು 2021ರ ನವೆಂಬರ್ 23 ರಿಂದ 25ರವರೆಗೆ ಬೆಂಗಳೂರಿನ ಅಕಾಡೆಮಿ ಕಛೇರಿಯಲ್ಲಿ ಆಯೋಜಿಸಲಾಗಿದೆ.

ಆಸಕ್ತರು ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕಾ ವಿಜ್ಞಾನಗಳ ಕಾಲೇಜು ಮಹಾದ್ವಾರ, ಜಿ.ಕೆ.ವಿ.ಕೆ. ಆವರಣ, ದೊಡ್ಡಬೆಟ್ಟಹಳ್ಳಿ ಬಸ್ ನಿಲ್ದಾಣ, ವಿದ್ಯಾರಣ್ಯಪುರ ಬೆಂಗಳೂರು – 560097. ಗೂಗಲ್ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು (https://forms.gle/mcwVgMfYaXPtkJDv8).

ಹೆಸರಾಂತ ಛಾಯಾಗ್ರಾಹಕರು ಮತ್ತು ದಿಗ್ದರ್ಶಕರು ತರಬೇತಿಯನ್ನು ನೀಡಲಿದ್ದಾರೆ. ಶಿಬಿರಾರ್ಥಿಗಳಿಗೆ ಉಚಿತ ಭೋಜನ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಆದರೆ ಪ್ರಯಾಣ ವೆಚ್ಚವನ್ನು ಶಿಬಿರಾರ್ಥಿಗಳೇ ಭರಿಸುವುದು. ನೋಂದಣಿಗೆ ಕೊನೆಯ ದಿನಾಂಕ 19ನೇ ನವೆಂಬರ್ 2021 ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಶರ್ಮ, ಸಂಯೋಜಕರು, ಕುತೂಹಲಿ –9886640328 ಅಥವಾ ಕು.ಅಮೃತೇಶ್ವರಿ – 9739467440 ಅಥವಾ ಕೆ. ಸಿ. ಉಮೇಶ್, ಕೆ.ಎಸ್.ಟಿ.ಎ. 9008675123 ಅವರನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Science Videography Workshop

Bengaluru, November 12 (Karnataka Information):

Karnataka Science and Technology Academy (KSTA), an autonomous organisation under the Department of Science and Technology, Government of Karnataka, in association with Vigyan Prasar, Department of Science and Technology, Government of India, New Delhi is organizing a three day residential **"Science Videography Workshop"** during November 23-25, 2021 (Tuesday – Thursday) at KSTA premises, Prof. U R Rao Vigyan Bhavan, Horticulture College Entrance, GKVK Campus, Major Sandeep Unnikrishnan Road, Near Doddabettahalli Bus Stop, Vidyaranyapura, Bengaluru - 560097. Interested participants may register by submitting the google form (https://forms.gle/mcwVgMfYaXPtkJDv8). Eminent cinematographers/film makers will deliver talks and conduct practical trainings. The participants will be provided boarding and lodging, while participants have to bear travel expenses. **Last date for registration is**: **19th November 2021 (Friday)**. For further details contact Sharma, Coordinator, Kutuhali - 9886640328 or Ms. Amrutheswari – 9739467440 or K C Umesh, KSTA - 9008675123